# ಕನ್ನಡ ಕಲಾ ಸಿನೆಮಾ ಪರಂಪರೆ: ಸಾಹಿತ್ಯಕ–ಸಾಮಾಜಿಕ ಬದ್ಧತೆ

ಕುಮಾರ ಎಂ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್‌ಪೇಟೆ, ಹೊಸನಗರ.

## ABSTRACT:

ಸಿನೆಮಾ ಆರಂಭದಿಂದಲೂ ಒಂದು ಪ್ರಭಾವಿಶಾಲಿಯಾದ ಮಾಧ್ಯಮವಾಗಿದೆ. ಇದಕ್ಕೆ ಅದು ಒಳಗೊಳ್ಳುವ ಕಲೆಯ ಹಲವು ಸಂಗತಿಗಳು ಕಾರಣವಾಗಿವೆ. ಹೀಗಾಗಿ ಸಿನೆಮಾ ಜನರ ಬದುಕನ್ನು ಪ್ರಭಾವಿಸಬಲ್ಲ ಮಾಧ್ಯಮ ಎನಿಸಿದೆ ಮತ್ತು ಆಕರ್ಷಣೆಗೆ ಪಾತ್ರವಾಗಿದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯದಂತೆ ಇದನ್ನು ಸಹ ಸಮಾಜದ 'ಪ್ರತಿ ಬಿಂಬ' ಇಲ್ಲವೆ 'ಗತಿಬಿಂಬ' ಎನ್ನಬಹುದಾಗಿದೆ. ಅಂದರೆ ಒಂದು ಸಾಹಿತ್ಯ ಕೃತಿ ಓದುಗನ ಮೇಲೇ ಪ್ರಭಾವವನ್ನು ಬೀರು ವಂತೆ, ಪ್ರೇಕ್ಷಕನು ಕೂಡ ಒಂದು ಸಿನೆಮಾದ ವೀಕ್ಷಣೆಯಿಂದ ಪ್ರಭಾವಿತನಾಗುವನೆಂದು ಭಾವಿಸಬಹುದಾಗಿದೆ. ಆದರೂ ಇವೆರಡು ಭಿನ್ನ ಮಾಧ್ಯಮಗಳು ಎಂಬ ತಿಳುವಳಿಕೆ ಅಗತ್ಯ. ಏಕೆಂದರೆ ಸಾಹಿತ್ಯ ಕೃತಿಯೊಂದು ಸಿನೆಮಾ ಮಾಧ್ಯಮಕ್ಕೆ ಬಂದಾಗ ಅದು ತನ್ನ ಸ್ವರೂಪ ದಲ್ಲಿ ಪರಿವರ್ತನೆ ಹೊಂದಿ 'ಚಿತ್ರಕಥೆ' ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಹೀಗೆ ಸಾಹಿತ್ಯದ ರೂಪವೊಂದು ಚಿತ್ರಕಥೆಯಾಗಿ ಸಿನೆಮಾ ಮಾಧ್ಯಮದ ಮೂಲಕ ಅಭಿವ್ಯಕ್ತಿ ಗೊಳ್ಳುವಾಗ ಅದು ಒಳಗೊಳ್ಳುವ ಸಾಹಿತ್ಯಕ–ಸಾಮಾಜಿಕ ಬದ್ಧತೆಯನ್ನು ಕನ್ನಡದ 'ಕಲಾ ಸಿನೆಮಾ', 'ಪರ್ಯಾಯ ಸಿನೆಮಾ', 'ಸಮಾನಾಂತರ ಸಿನೆಮಾ'ಗಳು ಎಂದು ಕರೆಸಿಕೊಳ್ಳುವ ಚಿತ್ರಗಳ ಪರಂಪರೆಯನ್ನು ಆಧರಿಸಿ ವಿಶ್ಲೇಷಿಸುವುದು ಈ ಲೇಖನದ ಪ್ರಮುಖ ಉದ್ದೇಶ ವಾಗಿರುತ್ತದೆ.

## KEYWORDS:

ಸಿನೆಮಾ, ಮಾಧ್ಯಮ, ಓದುಗ, ಪ್ರೇಕ್ಷಕ, ಚಿತ್ರಕಥೆ, ಕಲಾ ಸಿನೆಮಾ, ಚಿತ್ರ, ಪರಂಪರೆ.

ಸಿನೆಮಾ ಒಂದು ಪ್ರಭಾವಿ ಮಾಧ್ಯಮವಾಗಿದೆ. ಇದಕ್ಕೆ ಅದು ಒಳಗೊಳ್ಳುವ ಕಲೆಯ ಹಲವು ಸಂಗತಿಗಳು ಕಾರಣವಾಗಿವೆ. ಜೊತೆಗೆ ಸಮಾಜದ ಜನರ ಬದುಕನ್ನು ಪ್ರಭಾವಿಸ ಬಲ್ಲುದು ಎಂಬ ಕಾರಣಕ್ಕಾಗಿಯೂ ಇದು ಆಕರ್ಷಣೆಗೆ ಪಾತ್ರವಾಗಿದೆ ಮತ್ತು ಹೆಚ್ಚಿನ ಮಹತ್ವವನ್ನು ಪಡೆದು ಕೊಂಡಿದೆ. ಹಾಗಾಗಿ ಸಾಹಿತ್ಯದಂತೆ ಇದನ್ನು ಸಹ ಸಮಾಜದ 'ಪ್ರತಿ ಬಿಂಬ' ಇಲ್ಲವೆ 'ಗತಿಬಿಂಬ' ಎನ್ನಬಹುದಾಗಿದೆ. ಒಂದು ಸಾಹಿತ್ಯ ಕೃತಿ ಓದುಗನ ಮೇಲುಂಟು ಮಾಡುವ ಪ್ರಭಾವವನ್ನು ಪ್ರೇಕ್ಷಕನು ಒಂದು ಸಿನೆಮಾ ವೀಕ್ಷಣೆಯಿಂದ ನಿರೀಕ್ಷಿಸಬಹುದಾಗಿ ದೆ. ಆದಾಗ್ಯೂ ಸಾಹಿತ್ಯ ಕೃತಿಯೊಂದು ಸಿನೆಮಾ ಮಾಧ್ಯಮಕ್ಕೆ ಬಂದಾಗ ಅದು ತನ್ನ ಸ್ವರೂಪ ದಲ್ಲಿ ಪರಿವರ್ತನೆ ಹೊಂದಿ 'ಚಿತ್ರಕಥೆ'

ಎಂಬ ಹೆಸರಿನಿಂದ ಗುರುತಿಸಲ್ಪಡುವುದು. ಹೀಗೆ ಸಾಹಿತ್ಯದ ರೂಪವೊಂದು ಚಿತ್ರಕಥೆಯಾಗುವಾಗ, ಅದು ಒಳಗೊಳ್ಳುವ ಸಾಹಿತ್ಯಕ-ಸಾಮಾ ಜಿಕ ಬದ್ಧತೆಯನ್ನು ಕನ್ನಡದ 'ಕಲಾ' ಸಿನೆಮಾಗಳ ಪರಂಪರೆಯ ವಿಶ್ಲೇಷಣೆಯ ಮೂಲಕ ಗುರುತಿಸುವುದು ಈ ಲೇಖನದ ಉದ್ದೇಶವಾಗಿರುತ್ತದೆ.

"೧೯೩೪ರ ಮಾರ್ಚ್ ೦೩ ರಂದು ಕನ್ನಡದ ಮೊದಲ ಚಿತ್ರ 'ಸತಿ ಸುಲೋಚನಾ' ಬಿಡುಗಡೆ ಯಾಗುವ ಮೂಲಕ ಕನ್ನಡ ಚಿತ್ರರಂಗದ ಜನನವಾಯಿತು. ಅಲ್ಲಿಂದ ಇಲ್ಲಿಯವರೆಗೆ ಸುಮಾರು ಐದು ಸಾವಿರ ಚಿತ್ರಗಳು ನಿರ್ಮಾಣವಾಗಿವೆ. ಕನ್ನಡ ಚಿತ್ರಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಹೆಸರು ಮಾಡಿವೆ". ೧ ಹೀಗೆ ಪ್ರಸಿದ್ಧಿ ಗಳಿಸಿದ ಸಿನೆಮಾಗಳಲ್ಲಿ ಸಾಹಿತ್ಯ ಕೃತಿಗಳು ಚಿತ್ರಕಥೆಗಳಾಗಿ ಮೂಡಿಬಂದವುಗಳ ಸಂಖ್ಯೆಯೇ ಅಧಿಕವೆನ್ನಬಹುದು. ಅದರಲ್ಲೂ 'ಹೊಸ ಅಲೆಯ' ಸಿನೆಮಾಗಳ ಪಾತ್ರ ದೊಡ್ಡದು.

ಮುಖ್ಯವಾಹಿನಿಯ ಸಿನೆಮಾಗಳಿಗಿಂತ ವಿಭಿನ್ನವಾದ ಆಲೋಚನೆಯುಳ್ಳ, ಪ್ರೇಕ್ಷಕನಿಗೆ ವಿಚಾರ ಪ್ರಚೋದನೆಗೆ ಹಚ್ಚುವ ಸಿನೆಮಾಗಳನ್ನು 'ಕಲಾತ್ಮಕ', 'ಸಮಾನಾಂತರ' 'ಹೊಸ ಅಲೆಯಚಿತ್ರ' ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಕನ್ನಡದಲ್ಲಿ ಕಲಾತ್ಮಕ ಸಿನೆಮಾ ಪರಂಪರೆ ೧೯೭೦ರ ದಶಕದಲ್ಲಿ ಆರಂಭ ಗೊಂಡಿತು. ಮೊದಲಿಗೆ ಪಟ್ಟಾಭಿ ರಾಮರೆಡ್ಡಿಯವರ ನಿರ್ದೇಶನದಲ್ಲಿ ಯು. ಆರ್. ಅನಂತಮೂರ್ತಿ ಯವರ 'ಸಂಸ್ಕಾರ' ಕಾದಂಬರಿಯನ್ನಾಧರಿಸಿದ ಚಲನಚಿತ್ರ ಅದೇ ಹೆಸರಿನಲ್ಲಿ ಮೂಡಿಬಂದಿತು. ಪಟ್ಟಾಭಿ ರಾಮರೆಡ್ಡಿಯವರಿಂದ ಶುರುವಾದ ಕನ್ನಡ ಕಲಾ ಸಿನೆಮಾಗಳ ಪ್ರಯಾಣದಲ್ಲಿ ಬಿ. ವಿ. ಕಾರಂತ್, ಗಿರೀಶ ಕಾಸರವಳ್ಳಿ, ಗಿರೀಶ ಕಾರ್ನಾಡ್, ಪಿ. ಲಂಕೇಶ್, ಚಂದ್ರಶೇಖರ ಕಂಬಾರ, ಟಿ. ಎಸ್. ನಾಗಾಭರಣ, ಬರಗೂರು ರಾಮಚಂದ್ರಪ್ಪ, ಪಿ. ಶೇಷಾದ್ರಿಯವರು ಮೊದಲಾದವರು ಜೊತೆಯಾಗಿರುವರು.

ಕನ್ನಡ ಕಲಾತ್ಮಕ ಸಿನೆಮಾಗಳ ಪರಂಪರೆಯನ್ನು ದಾಖಲಿಸುವುದಕ್ಕೆ ಮೊದಲು ಈ ಚಿತ್ರಗಳು ಮುಖ್ಯ ಇಲ್ಲವೆ ಪ್ರಧಾನವಾಹಿನಿಯವುಗಳಿಗಿಂತ ಭಿನ್ನವಾಗಿರುವುದನ್ನು ತಿಳಿಯಬಹುದು. ಕಲಾತ್ಮಕ ಚಿತ್ರಗಳಲ್ಲಿ ಕಮರ್ಷಿಯಲ್ ಸಿನೆಮಾಗಳಲ್ಲಿ ಕಂಡುಬರುವ ನಾಯಕ-ನಾಯಕಿ-ಖಳನಾಯಕ ಕಲ್ಪನೆಯಾಗಲಿ; ಹಾಡು, ಹೊಡೆದಾಟ ಇರಲೇಬೇಕೆಂಬ ಹಠವಿಲ್ಲ. ಹೀಗೆ ಇಲ್ಲಿ ಸಿದ್ಧವಾದ ಮಾದರಿಯೊಂದು ಇರುವುದಿಲ್ಲ. ಚಿತ್ರಕಥೆಗೆ ತಕ್ಕಂತೆ ಅದು ರೂಪುಗೊಂಡಿರುತ್ತದೆ. ಆದುದರಿಂದ ಈ ಚಿತ್ರಗಳು ವಿಭಿನ್ನವೆನಿಸುತ್ತವೆ. ಇವುಗಳಲ್ಲದೆ ಇವನ್ನು ನಿರ್ಮಿಸುವ ನಿರ್ದೇಶರು, ವೀಕ್ಷಿಸುವ ಪ್ರೇಕ್ಷಕರು, ಕೆಲಮಟ್ಟಿಗೆ ನಟಿಸುವ ನಟರೂ ಕೂಡ ಭಿನ್ನ ಮನೋಧರ್ಮದವರಾಗಿರುವುದನ್ನು ಕಾಣುತ್ತೇವೆ.

**ಇತಿಹಾಸ:**

೧೯೭೦ ರ ದಶಕ ಕನ್ನಡ ಚಿತ್ರರಂಗ ಹಾಗೂ ಕನ್ನಡ ಕಲಾತ್ಮಕ ಚಿತ್ರಗಳ ದೃಷ್ಟಿಯಿಂದ ಪ್ರಮುಖವಾದ ಕಾಲಘಟ್ಟವಾಗಿದೆ. ಈ ವರ್ಷವೇ 'ಸಂಸ್ಕಾರ' ಚಿತ್ರದ ಮೂಲಕ ಕಲಾತ್ಮಕ ಸಿನೆಮಾಗಳಿಗೆ ವೇದಿಕೆ ಸಿದ್ಧಗೊಂಡಿತು. ನಂತರ ಬಿ. ವಿ. ಕಾರಂತರ ನಿರ್ದೇಶನದಲ್ಲಿ 'ವಂಶವೃಕ್ಷ' (೧೯೭೧), 'ಚೋಮನ ದುಡಿ' (೧೯೭೫), 'ತಬ್ಬಲಿಯು ನೀನಾದೆ ಮಗನೆ' (೧೯೭೭), ಗಿರೀಶ್ ಕಾರ್ನಾಡ್ ಅವರ ನಿರ್ದೇಶನದ 'ಕಾಡು' (೧೯೭೪), 'ಒಂದಾನೊಂದು ಕಾಲದಲ್ಲಿ' (೧೯೭೮), ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ 'ಘಟಶ್ರಾದ್ಧ' (೧೯೭೭), 'ಆಕ್ರಮಣ' (೧೯೭೯), ಜಿ. ವಿ. ಅಯ್ಯರ್ ಅವರ ನಿರ್ದೇಶನದ 'ಹಂಸಗೀತೆ' (೧೯೭೫), ಪಿ'ಲಂಕೇಶ್ ಅವರು ನಿರ್ದೇಶಿಸಿದ 'ಪಲ್ಲವಿ' (೧೯೭೭), ಚಂದ್ರಶೇಖರ ಕಂಬಾರರ ನಿರ್ದೇಶನದ 'ಕರಿಮಾಯಿ' (೧೯೭೫), 'ಕಾಡು ಕುದುರೆ' (೧೯೭೯), ಟಿ. ಎಸ್. ನಾಗಾಭರಣರ ನಿರ್ದೇಶನದ 'ಗ್ರಹಣ' (೧೯೭೮)೩ ಮೊದಲಾದ ಅತ್ಯುತ್ತಮ ಚಲನಚಿತ್ರಗಳು ತೆರೆಕಂಡವಲ್ಲದೆ ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳಿಗೆ ಪಾತ್ರವಾದವು. ಹಾಗೆಯೇ ಕೆಲವು ಚಿತ್ರಗಳು ಅಂತರಾಷ್ಟ್ರೀಯ ವೇದಿಕೆಗಳಲ್ಲಿಯೂ ಪ್ರದರ್ಶನಗೊಂಡು ಕನ್ನಡಕ್ಕೆ ಮಾನ್ಯತೆಯನ್ನು ಗಳಿಸಿಕೊಟ್ಟವು. ಇವುಗಳಲ್ಲಿ ಬಹಳಷ್ಟು ಸಿನೆಮಾಗಳು ಸಾಹಿತ್ಯಕೃತಿಗಳನ್ನು ಆಧರಿಸಿದ ಚಿತ್ರಕಥೆಗಳನ್ನು ಒಳಗೊಂಡಿರುವುದು ಸಹ ವಿಶೇಷ ಸಂಗತಿಯಾಗಿದೆ. ಹಾಗೆಯೇ ಕಮರ್ಷಿಯಲ್ ಸಿನೆಮಾ ಗಳಂತೆ ಇವು ಕೂಡ ವಿತರಕರಿಂದ ಚಿತ್ರ ಮಂದಿರಗಳಲ್ಲಿ ಬಿಡುಗಡೆಗೊಂಡು ಎಲ್ಲಾ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದವು.

೧೯೮೦ ರ ದಶಕದಲ್ಲಿಯೂ ಸಾಹಿತ್ಯ ಕೃತಿಗಳು ಚಿತ್ರಕಥೆಗಳಾಗಿ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಡುವುದನ್ನು ಕಾಣುತ್ತೇವೆ. ಕಾಸರವಳ್ಳಿಯವರಿಂದ 'ಮೂರುದಾರಿಗಳು' (೧೯೮೧), 'ತಬರನ ಕಥೆ' (೧೯೮೭) ಚಿತ್ರಗಳು ಮೂಡಿಬಂದವು. ಎಂ. ಎಸ್. ಸತ್ಯು ನಿರ್ದೇಶನದಲ್ಲಿ 'ಬರ' (೧೯೮೨) ತೆರೆ ಕಂಡಿತು. ಟಿ. ಎಸ್. ನಾಗಾಭರಣರಿಂದ 'ಅನ್ವೇಷಣೆ' (೧೯೮೨), 'ಬ್ಯಾಂಕರ್ ಮಾರ್ಗಯ್ಯ' (೧೯೮೩) ತೆರೆಗೆ ಬಂದವು. ಕೃಷ್ಣ ಮಾಸಡಿಯವರು 'ಅವಸ್ಥೆ' (೧೯೮೭) ನಿರ್ದೇಶಿಸಿ ದರು. ಇವೆಲ್ಲವು ರಾಷ್ಟ್ರಮಟ್ಟ ಹಾಗೂ ರಾಜ್ಯಸ್ತರದಲ್ಲಿ ಪ್ರಶಸ್ತಿ–ಪುರಸ್ಕಾರ ಪಡೆದವು. ಆದರೆ ಈ ದಶಕದಲ್ಲಿ ಪ್ರೇಕ್ಷಕರ ಮನೋ ದರ್ಮದಲ್ಲಿ ಬದಲಾವಣೆ ಕಂಡು ಬಂದಿತು. ಪರಿಣಾಮ ವಾಗಿ ಚಿತ್ರಗಳ ವಿತರಣೆ ಮತ್ತು ಪ್ರದರ್ಶನ ದಲ್ಲಿ ವ್ಯತ್ಯಯ ಉಂಟಾ ದುದನ್ನು ಕಾಣುತ್ತೇವೆ. ಹೀಗಾಗಿಯೇ ಟಿ. ಎಸ್. ನಾಗಾಭರಣರು ಸಾಹಿತ್ಯಕೃತಿ ಗಳನ್ನು ಆಧರಿಸಿದ ಹಲವು ಚಿತ್ರಗಳನ್ನು ನಿರ್ದೇಶಿಸಿದರೂ ಅವುಗಳಲ್ಲಿ ಕಮರ್ಷಿಯಲ್ ಚಿತ್ರಗಳ ಅಂಶ ಗಳನ್ನೂ ಸೇರಿಸಿ, ಎಲ್ಲಾ ಮನೋಧರ್ಮಗಳ ಪ್ರೇಕ್ಷಕರು ವೀಕ್ಷಿಸುವಂತಹ ಸಿನೆಮಾಗಳನ್ನು ತೆರೆಗೆ ತಂದಿರುವುದನ್ನು ಗಮನಿಸಬಹುದು೪.

ಗಿರೀಶ್ ಕಾಸರವಳ್ಳಿಯವರು ಚಿತ್ರನಿರ್ದೇಶಕರಾಗಿ ಕಲಾತ್ಮಕ ಸಿನೆಮಾದಿಂದ ವೃತ್ತಿ ಬದುಕನ್ನು ಆರಂಭಿಸಿದುದನ್ನು ಈಗಾಗಲೇ ಗಮನಿಸಲಾಗಿದೆ. ಹಾಗೆಯೇ ಕಾಸರವಳ್ಳಿಯವರು ಇಂದಿಗೂ ಅದನ್ನು ಮುಂದುವರಿಸಿದ್ದಾರೆ. 'ಕುಬಿ ಮತ್ತು ಇಯಾಲ' (೧೯೯೨), 'ತಾಯಿ ಸಾಹೇಬ' (೧೯೯೭), 'ದ್ವೀಪ' (೨೦೦೨), 'ಗೃಹ ಭಂಗ' (೨೦೦೩), 'ಹಸೀನಾ' (೨೦೦೪), 'ನಾಯಿ ನೆರಳು' (೨೦೦೬), 'ಗುಲಾಬಿ ಟಾಕೀಸ್' (೨೦೦೮), 'ಕನಸೆಂಬ ಕುದುರೆಯನೇರಿ' (೨೦೧೦), 'ಕೂರ್ಮಾವತಾರ' (೨೦೧೨), 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' (೨೦೨೦)೫ ಚಿತ್ರಗಳು ಸಾಹಿತ್ಯ ಕೃತಿ**ಗಳನ್ನು ಆಧರಿಸಿದ ಚಿತ್ರಕಥೆಯುಳ್ಳವಾಗಿವೆ. ಈ ಸಿನೆಮಾಗಳು ಕಾಸರವಳ್ಳಿಯವರ ನಿರ್ದೇಶನದಲ್ಲಿ ತೆರೆಕಂಡು ಕನ್ನಡ ಸಿನೆಮಾರಂಗಕ್ಕೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ತಂದುಕೊಟ್ಟಿವೆ.

ಕಲಾತ್ಮಕ ಚಿತ್ರಗಳಿಗಾಗಿಯೇ ಹೆಸರಾದ ಗಿರೀಶ್ ಕಾರ್ನಾಡರು ೧೯೯೯ರಲ್ಲಿ 'ಕಾನೂರು ಹೆಗ್ಗಡತಿ'೬ಯ ಮೂಲಕ ಮತ್ತೆ ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಟ್ಟರು. ಬಿ. ವಿ. ಕಾರಂತ್. ಕಾಸರವಳ್ಳಿ, ಕಾರ್ನಾಡ, ಕಂಬಾರರಂತೆ ಕಲಾತ್ಮಕ ಸಿನೆಮಾ ನಿರ್ದೇಶಕರ ಸಾಲಿಗೆ ಸೇರುವ ಮತ್ತೊಂದು ಹೆಸರು ಬರಗೂರು ರಾಮಚಂದ್ರಪ್ಪನವರದು. ಪ್ರಯೋಗಶೀಲರಾದ ಬರಗೂರ ರು ತಮ್ಮದೇ ಕೃತಿಗಳನ್ನು ಚಿತ್ರಕಥೆಗಳಾಗಿಸಿ 'ಸೂರ್ಯ' (೧೯೮೬), 'ಕ್ಷಾಮ' (೨೦೦೨), 'ಶಾಂತಿ' (೨೦೦೩), 'ಏಕಲವ್ಯ' (೨೦೦೭), 'ಶಬರಿ' (೨೦೧೯), ಮೊದಲಾದ ಸಿನೆಮಾಗಳನ್ನು ಕನ್ನಡ ಪ್ರೇಕ್ಷಕರಿಗೆ ನೀಡಿದ್ದು, ಇವು ಕೆಲವು ಪ್ರಶಸ್ತಿಗೂ ಪಾತ್ರವಾಗಿವೆ. ಬರಗೂರರು ಇಂದಿಗೂ ತಮ್ಮನ್ನು ಪ್ರಯೋಗಶೀಲತೆಯಲ್ಲಿ ತೊಡಗಿಸಿಕೊಂಡಿದ್ದು, ಜನ್ನನ 'ಯಶೋಧರ ಚರಿತೆ' ಯನ್ನು ಆಧರಿಸಿ ನಿರ್ದೇಶಿಸಿದ ಸಿನೆಮಾ 'ಅಮೃತಮತಿಯ ಸ್ವಗತ' (೨೦೨೪) ಮೆಚ್ಚುಗೆಯನ್ನು ಪಡೆದಿದೆ.

ಇತ್ತೀಚಿನ ವರ್ಷಗಳಲ್ಲಿ ಕಲಾತ್ಮಕ ಸಿನೆಮಾಗಳಿಗಾಗಿ ಗುರುತಿಸಲ್ಪಡುವ ಪ್ರಮುಖ ಹೆಸ ರೆಂದರೆ ಪಿ. ಶೇಷಾದ್ರಿಯವರು. ಇವರು ಕಲಾತ್ಮಕ ಚಿತ್ರಗಳ ನಿರ್ಮಾಣದ ತೊಡಕನ್ನು ನಿವಾರಿ ಸುವ ಹೊಸ ಪರಿಭಾಷೆಯನ್ನು ಸೃಷ್ಟಿಸಿ, ಈ ಸಿನೆಮಾಗಳ ಬೆಳವಣಿಗೆಗೆ ನೂತನ ಮಾರ್ಗ ವನ್ನು ರೂಪಿಸಿಕೊಟ್ಟರು. 'ಸಹಕಾರಿ ತತ್ವ'ದಡಿಯಲ್ಲಿ ಚಿತ್ರ ನಿರ್ಮಾಣಕ್ಕೆ ಮುನ್ನುಡಿ ಬರೆದಂತೆ 'ನವಚಿತ್ರ' ಎಂಬ ಒಂಭತ್ತು ಜನರ ತಂಡದಿಂದ ನಿರ್ಮಾಣಗೊಂಡ 'ಮುನ್ನುಡಿ' (೨೦೦೦) ಚಿತ್ರವನ್ನು ನಿರ್ದೇಶಿಸಿದರು. ಇದು ಅತ್ಯುತ್ತಮ ಸಾಮಾಜಿಕ ಕಳಕಳಿಯುಳ್ಳ ಚಿತ್ರ ವೆಂದು ರಾಷ್ಟ್ರ ಪ್ರಶಸ್ತಿಗೆ ಪಾತ್ರವಾಯಿತು. ಇದರ ತರುವಾಯ ಮತ್ತೆ ಸಹಕಾರಿ ತತ್ವದಿಂದ ಕಟ್ಟಿದ 'ಮಿತ್ರಚಿತ್ರ' ತಂಡದಿಂದ ತಯಾರಾದ 'ಅತಿಥಿ' (೨೦೦೨) ಚಿತ್ರಕ್ಕೂ ಶೇಷಾದ್ರಿಯವರದೇ ನಿರ್ದೇಶನವಿದ್ದು; ಇದು ಕೂಡ ಪ್ರೇಕ್ಷಕರ ಮೆಚ್ಚುಗೆ ಪಡೆಯಿತಲ್ಲದೆ, ಉತ್ತಮ ಪ್ರಾದೇಶಿಕ ಚಿತ್ರ ವೆಂದು ರಾಷ್ಟ್ರ ಪ್ರಶಸ್ತಿಯನ್ನೂ ಪಡೆದುಕೊಂಡಿತು. ಮುಂದಿನ

ವರ್ಷಗಳಲ್ಲಿ ನಿರ್ದೇಶಿಸಿದ 'ಬೇರು (೨೦೦೪), 'ತುತ್ತೂರಿ' (೨೦೦೫), 'ವಿಮುಕ್ತಿ' (೨೦೦೮), 'ಬೆಟ್ಟದ ಜೀವ' (೨೦೧೦), ಭಾರತ್ ಸ್ಟೋರ್ಸ್' (೨೦೧೨), ಡಿಸೆಂಬರ್ 1' (೨೦೧೩), 'ವಿದಾಯ' (೨೦೧೪), 'ಬೇಟಿ' (೨೦೧೭), 'ಮೂಕಜ್ಜಿ ಯ ಕನಸುಗಳು' (೨೦೧೮), 'ಮೋಹನದಾಸ' (೨೦೧೯) ಒದಂತಹ ಸಿನೆಮಾಗಳು ಕನ್ನಡ ಸಿನೆಮಾ ಲೋಕಕ್ಕೆ ಉತ್ತಮ ಕೊಡುಗೆಗಳಾಗಿವೆ. ಹಾಗೆಯೇ ಇಲ್ಲಿಯ ವರೆಗೆ ಇವರು ನಿರ್ದೇಶಿಸಿ ದ ಎಲ್ಲಾ ಚಿತ್ರಗಳು, ಸಿನೆಮಾದ ಯಾವುದಾದರೂ ಒಂದು ವಿಭಾಗದಲ್ಲಿ ಪರಿಗಣಿತಗೊಂಡು ಪ್ರಶಸ್ತಿಗೆ ಪಾತ್ರವಾಗಿವೆ. ಜೊತೆಗೆ ಶೇಷಾದ್ರಿಯವರಿಗೆ ಸತತ ವಾಗಿ ಒಂಭತ್ತು ಬಾರಿ ರಾಷ್ಟ್ರ ಪ್ರಶಸ್ತಿಯನ್ನೂ ತಂದುಕೊಟ್ಟಿರುವುದು ಕನ್ನಡಚಿತ್ರರಂಗ ಹೆಮ್ಮೆಪಡುವ ಸಂಗತಿಯಾಗಿದೆ. ಜೊತೆಗೆ ಈ ಚಿತ್ರಗಳಿಂದಾಗಿ ಶೇಷಾದ್ರಿಯವರು ಕನ್ನಡದ ಕಲಾತ್ಮಕ ಸಿನೆಮಾಗಳಿಗೆ ಬ್ರಾಂಡ್ ನೇಮ್ ಆಗಿದ್ದಾರೆ.

ಇಲ್ಲಿ ಉಲ್ಲೇಖಿತರಲ್ಲದೆ, ಮತ್ತೆ ಕೆಲ ನಿರ್ದೇಶಕರು ಕೆಲವು ಉತ್ತಮ ಚಿತ್ರಗಳನ್ನು ತೆರೆಗೆ ತಂದುದನ್ನು ಇಲ್ಲಿ ಗಮನಿಸಬಹುದಾಗಿದೆ. 'ಕಾಕನ ಕೋಟೆ'ಯ ಸಿ. ಆರ್. ಸಿಂಹ, 'ಸರಸಮ್ಮನ ಸಮಾಧಿ' ಚಿತ್ರವನ್ನು ತೆರೆಗೆ ತಂದ ಕೆ. ಎನ್. ಟಿ. ಶಾಸ್ತ್ರಿ, 'ಅಬಚೂರಿನ ಪೋಸ್ಟಾಫೀಸು'ವಿನ ಎನ್. ಲಕ್ಷ್ಮೀನಾರಾಯಣ. 'ಮೌನಿ'ಯನ್ನು ತೆರೆಗೆ ಪರಿಚಯಿಸಿದ ಲಿಂಗದೇವರು, 'ಅರ್ಥ'ದ ಬಿ. ಸುರೇಶ, 'ಕೌದಿ'ಯನ್ನು ನಿರ್ದೇಶಿಸಿದ ರವೀಂದ್ರನಾಥ ಸಿರಿವಾರ, 'ಪ್ರಶ್ನೆ'ಯನ್ನು ತೆರೆಗೆ ತಂದ ನಿಖಿಲ್ ಮಂಜು ಮೊದಲಾದವರು ಸಹ ಕನ್ನಡ ಕಲಾತ್ಮಕ ಸಿನೆಮಾ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇಲ್ಲಿ ಉಲ್ಲೇಖಿತಗೊಳ್ಳದ ಮತ್ತೆ ಹಲವರು ಕನ್ನಡ ಕಲಾತ್ಮಕ ಸಿನೆಮಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಈ ಸಿನೆಮಾದ ಬೆಳ ವಣಿಗೆಯಲ್ಲಿನ ಆಶಾದಾಯಕ ಸಂಗತಿಯಾಗಿದೆ ಎನ್ನಬಹುದು.

ಪ್ರಸ್ತುತ ಕನ್ನಡ ಚಿತ್ರರಂಗದಲ್ಲಿ ಸಿನೆಮಾ ವಿತರಣೆ, ಸಿನೆಮಾ ಮಂದಿರಗಳ ಲಭ್ಯತೆ, ಹಾಗೂ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಹೋಗಿ ಚಿತ್ರ ವೀಕ್ಷಿಸುವವರ ಸಂಖ್ಯೆಯಲ್ಲಿನ ಇಳಿ ಮುಖತೆ, ಆಧುನಿಕ ಕಾಲಮಾನಕ್ಕೆ ತಕ್ಕಂತಹ ಸಿನಿಮಾ ಪ್ರದರ್ಶನ ವೇದಿಕೆಗಳ ಲಭ್ಯತೆಲ ಗಳು ಚಿತ್ರನಿರ್ಮಾಣ ಮತ್ತು ಪ್ರಸರಣ ವ್ಯಸ್ಥೆಯ ಮೇಲೆ ಪ್ರಭಾವ ಬೀರಿವೆ. ಈ ಸಂಗತಿಗಳು ಕನ್ನಡ ಕಲಾತ್ಮಕ ಚಿತ್ರಗಳಿಗೂ ಅನ್ವಯಿಸುತ್ತವೆ. ಆದಾಗ್ಯೂ ಮುಖ್ಯವಾಹಿನಿಯ ಸಿನೆಮಾ ಗಳು ನಿರ್ಮಾಣಗೊಳ್ಳುತ್ತಲೇ ಇವೆ. ಅಂತೆಯೇ ಕಲಾತ್ಮಕ ಚಿತ್ರಗಳೂ ಕೂಡ ಈ ಮೊದಲಿನ ಸಂಖ್ಯೆಯಂತಿಲ್ಲವಾದರೂ ನಿರ್ಮಾಣದ ಪ್ರಕ್ರಿಯೆಯಂತು ನಿಂತಿಲ್ಲ. ಅವು ಇಂದಿಗೂ ತೆರೆಗೆ ಬರುತ್ತಿರುವುದನ್ನು ಕಾಣುತ್ತೇವೆ.

**ವಿಶ್ಲೇಷಣೆ: ೧. ಸಾಹಿತ್ಯ ಮತ್ತು ಸಿನೆಮಾ:**

ಕಲಾತ್ಮಕ ಚಿತ್ರಗಳಲ್ಲಿ ಬಳಕೆಯಾಗುವ 'ಚಿತ್ರಕಥೆ' ಸಾಮಾನ್ಯವೆನ್ನುವಂತೆ ಸಾಹಿತ್ಯಕ ಹಿನ್ನೆಲೆಯಿಂದ ರಚಿತಗೊಂಡಿರುತ್ತದೆ. ಹೀಗಾಗಿ ಸಾಹಿತ್ಯ ಕೃತಿಗೂ ಮತ್ತು

ಚಿತ್ರಕಥೆಗೂ ಅವಿನಾಭಾವ ಸಂಬಂಧವಿರುತ್ತದೆ. ಆದರೆ ಸಾಹಿತ್ಯ ಕೃತಿಯೊಂದು ಚಿತ್ರಕಥೆಯಾಗಿ ಪರಿ ವರ್ತನೆ ಹೊಂದುವಾಗ ಕೆಲವು ಬದಲಾವಣೆಯೊಂದಿಗೆ ಹೊಸ ರೂಪ ತಳೆಯುವುದನ್ನು ಕಾಣುತ್ತೇವೆ. ಕಾದಂಬರಿ ಇಲ್ಲವೆ ಒಂದು ಕಥೆ ಅಭಿವ್ಯಕ್ತಿಗೊಳ್ಳುವುದು ಭಾಷಾಮಾಧ್ಯಮದ ಮೂಲಕ. ಇಲ್ಲಿಏನನ್ನು ಹೇಳಬೇಕಿದ್ದರೂ ಭಾಷೆಯನ್ನು ಸಂವಾಹಕವನ್ನಾಗಿ ಮಾಡಿ ಕೊಳ್ಳಬೇಕಾಗುತ್ತದೆ. ಆದರೆ ದೃಶ್ಯ ಮಾಧ್ಯಮವಾದ ಸಿನೆಮಾಕ್ಕೆ ಭಾಷೆ ಎನ್ನುವುದು ಅನಿ ವಾರ್ಯವಲ್ಲ. ಅದು ತನ್ನ ಇತರ ಅಬಿವ್ಯಕ್ತಿಯ ಮಾಧ್ಯಮಗಳಲ್ಲಿ ಅದನ್ನು ಒಂದು ಸಾಧನ ವಾಗಿ ಬಳಸಿಕೊಳ್ಳುತ್ತದೆ. ಅದರಾಚಗೆ ಭಾಷೆಗೆ ಅಲ್ಲಿ ಜಾಗ ಕಡಿಮೆ ಎನ್ನಬಹುದು. ಭಾಷೆಯ ಮೂಲಕ ಹೇಳಬಹುದಾದದ್ದನ್ನೆಲ್ಲ ದೃಶ್ಯಗಳಲ್ಲಿ ಸಂವಹಿಸಬಹುದು. ಹೀಗಾಗಿಯೇ ಸಿನೆಮಾ ಒಂದು ಪ್ರಭಾವಶಾಲಿ ಮಾಧ್ಯಮವೆಂದು ಕರೆಸಿಕೊಂಡಿದೆ. ಆದುದರಿಂದ ಮೂಲತಃ ಇವೆ ರಡರ ಅಭಿವ್ಯಕ್ತಿಯಲ್ಲಿಯೇ ವ್ಯತ್ಯಾಸಗಳಿವೆ. ಆದಾಗ್ಯೂ ಚಿತ್ರಕಥೆ ಒಂದು ಕಥೆಯ ಹಿನ್ನೆಲೆ ಯನ್ನು ಹೊಂದುವುದರಿಂದ ಅದು ಮತ್ತಷ್ಟು ಪ್ರಭಾವಶಾಲಿಯಾಗುತ್ತದೆ ಎನ್ನಬಹುದು.

ಈ ಹಿನ್ನೆಲೆಯಲ್ಲಿ ಚಿತ್ರಕಥೆ ಹೇಗೆ ಸಾಹಿತ್ಯಕ ಬದ್ಧತೆಯನ್ನು ಸಾಧಿಸಿದೆ ಎನ್ನುವುದನ್ನು 'ಚೋಮನ ದುಡಿ' ೯ಕಾದಂಬರಿಯನ್ನು ನಿದರ್ಶನಾತ್ಮಕವಾಗಿ ಗಮನಿಸಬಹುದು. ಡಾ. ಕೆ. ಶಿವರಾಮ ಕಾರಂತರ ಈ ಕಾದಂಬರಿ ಮೊದಲಿಗೆ ೧೯೩೩ ರಲ್ಲಿ ಪ್ರಕಟವಾಯಿತು. ನಂತರ ಇದನ್ನು ಬಿ. ವಿ. ಕಾರಂತರು ೧೯೭೫ ರಲ್ಲಿ ಚಿತ್ರಕಥೆಯಾಗಿ ಪರಿವರ್ತಿಸಿದರಲ್ಲದೆ, ನಿರ್ದೇಶನ ವನ್ನು ಮಾಡಿ ತೆರೆಗೆ ತಂದು ಯಶಸ್ವಿಯಾದರು. ಕಾದಂಬರಿಯ ಆರಂಭ ಭೋಗನಹಳ್ಳಿಯ ವರು ಪಂಜದ ಜಾತ್ರೆಗೆ ಹೋಗಿ ರಾತ್ರಿಯ ಗಾಢ ಕತ್ತಲೆಯಲ್ಲಿ ಪಂಜಿನೊಂದಿಗೆ ಹಿಂದಿರುಗು ವಾಗ ಕಾಣಿಸಿಕೊಳ್ಳುವ ಶಬ್ದ ಯಾವುದೆಂದು ನಿಂತು ಕೇಳಿಸಿಕೊಂಡ ಜಮೀನುದಾರ ಸಂಕಪ್ಪಯ್ಯ ಇದು ಮನೆ ಒಕ್ಕಲು ಚೋಮನ 'ದುಡಿ'ಯ ದನಿಯೆಂದು ಮುಂದುವರಿಯುವು ದರಿಂದ ಆಗುತ್ತದೆ. ಹಾಗೆಯೇ ಕಾದಂಬರಿಯ ಮುಕ್ತಾಯ ಕೂಡ ಚೋಮನ ದುಡಿಯ ದನಿ (ಸಾವು) ನಿಲ್ಲುವುದರೊಂದಿಗೆ ಆಗುವುದು. ಈ ಮಧ್ಯದಲ್ಲಿ ಚೋಮನ ಮಕ್ಕಳಾದ ಚನಿಯ, ಗುರುವ, ಬೆಳ್ಳಿ, ಕಾಳ, ನೀಲ, ಚೋಮನ ಗುಡಿಸಲು, ಆತನ ಬೇಸಾಯಗಾರನಾಗುವ ಕನಸಿಗೆ ಇಂಬು ಕೊಡುತ್ತಿರುವ ಹೋರಿಗಳು, ಸಂಕಪ್ಪಯ್ಯನ ಜಮಿನ್ದಾರಿಕೆ, ಕಾಫಿ ತೋಟದ ಮೀಂಗೇಲ ದೊರೆಗಳು, ಸೇರೆಗಾರ ಮನ್ವೇಲ-ಇವರ ಬದುಕಿನ ಚಿತ್ರಗಳು ಮೂಡಿಬಂದಿವೆ.

ಬಿ. ವಿ. ಕಾರಂತರ ಚಿತ್ರಕಥೆ ಮತ್ತು ನಿರ್ದೇಶನದಲ್ಲಿ ತೆರೆ ಕಂಡಿರುವ ಈ ಸಿನೆಮಾದಲ್ಲಿ ಕೆಲವು ಸಂದರ್ಭಗಳನ್ನು ಹೊತುಪಡಿಸಿದರೆ ಕಾದಂಬರಿಯ ಘಟನಾವಳಿಗಳನ್ನು ಸಾಧ್ಯ ವಾದಷ್ಟು ಮಟ್ಟಿಗೆ ದೃಶ್ಯಮಾಧ್ಯಮಕ್ಕೆ ತರುವ ಪ್ರಯತ್ನ

ಮಾಡಿದೆ ಎನ್ನಬಹುದು. ಸಂಕಪ್ಪಯ್ಯನ ಒಕ್ಕಲು ಮಕ್ಕಳಾಗಿ ಒಡೆಯರ ಮನೆಗೆ ಬೇಕಾದ ಸೊಪ್ಪುಸೆದೆ, ದುಡಿತ ಮಾಡುವುದು, ಚೋಮ ಒಡೆಯರಲ್ಲಿ ತಾನು ಬೇಸಾಯಗಾರನಾಗುವ ಬಯಕೆಯನ್ನು ಮೂರು ಸಂದರ್ಭಗಳಲ್ಲಿ ವ್ಯಕ್ತಪಡಿಸುವುದು, ಈಡೇರದ ಆಸೆಗಾಗಿ ಕರುಗಳನ್ನು ಬೇಸಾಯದ ಮೂಲಕ ಹಾಗೂ ಕುಂಟುವಂತೆ ದಂಡಿಸುವುದು, ಕೊನೆಗೆ ಕಾಡಿಗೇ ಬಿಟ್ಟುಬರುವುದು, ಪಾದ್ರಿ ಯನ್ನು ಭೇಟಿಯಾಗುವುದು, ಹಾಗೆಯೇ ಗುರುವ ಕ್ರೈಸ್ತನಾದಾಗ, ಚನಿಯನ ಸಾವು, ಜಾತಿ ಕಾರಣಕ್ಕಾಗಿ ಮಗ ನೀಲ ನೀರಲ್ಲಿ ಮುಳುಗಿ ಸತ್ತಾಗ, ಬೆಳ್ಳಿ ದಾರಿ ತಪ್ಪಿದಳೆಂದು ಆತನು ಅನುಭವಿಸುವ ಸಂಕಟ, ತುಮುಲ –ವೇದನೆಗಳನ್ನು ದುಡಿಯನ್ನು ಬಾರಿಸುವ ಮೂಲಕ ಇಲ್ಲವೇ ಬಿರುಮ ಪೂಜಾರಿಯ ಗಡಂಗಿನ ಹೆಂಡವನ್ನು ಕುಡಿದು ವ್ಯಕ್ತಗೊಳಿಸುವುದನ್ನು ಬಿ. ವಿ. ಕಾರಂತರು ಬಹಳ ಚೆನ್ನಾಗಿ ಚಿತ್ರಮಾಧ್ಯಕ್ಕೆ ತಂದಿರುತ್ತಾರೆ. ಬೆಳ್ಳಿಯ ಅಸಹಾಕತೆ, ಮನ್ವೇಲ ಮತ್ತು ಮೀಂಗೇಲರು ಕೂಲಿಗಳನ್ನು ಶೋಷಣೆಗೈಯುವ ಬಗೆ, ಹಾಗೆಯೆ ಒಡೆಯ ರಿಂದ ಸಿಗುವ ಹೊಗೆಸೊಪ್ಪು–ಕವಳದಿಂದ, ಆಣೆ ದುಡ್ಡಿನಿಂದ ಅವರು ಪಡುವ ಆನಂದ, ನೆಂಟರು ಸೇರಿದಾಗ ಅನುಭವಿಸುವ ಸಂತೋಷವನ್ನೂ, ದೈವದ ಭಯ ಮತ್ತು ನಂಬಿಕೆಗಳು ದೃಶ್ಯಗಳಲ್ಲಿ ನೈಜವಾಗಿ ಚಿತ್ರಿತಗೊಂಡಿವೆ. ಈ ಸಿನೆಮಾದ ಸಂಭಾಷಣೆಯಲ್ಲಿ ಬಳಕೆಯಾದ ಭಾಷೆ ಕೂಡ ಕಾದಂಬರಿಯಲ್ಲಿ ಇರುವಂತೆ ಇದೆ. ಇದಕ್ಕೆ ಕಾದಂಬರಿಯ ಲೇಖಕರಾದ ಕೆ. ಶಿವರಾಮ ಕಾರಂತರ ಸಂಭಾಷಣೆ ಕಾರಣ ಎನ್ನಬಹುದು. ಹೀಗೆ ಈ ಕಾದಂಬರಿಯ ಹಲವು ಅಂಶಗಳು ಚಿತ್ರಮಾಧ್ಯಕ್ಕೆ ತಕ್ಕಂತೆ ಅಳವಟ್ಟು ಉತ್ತಮ ಚಿತ್ರವೊಂದು ಮೂಡಿಬರಲು ಸಾಧ್ಯವಾಗಿದೆ.

**ವಿಶ್ಲೇಷಣೆ: ೨. ಕಲಾತ್ಮಕ ಸಿನೆಮಾ ಮತ್ತು ಸಾಮಾಜಿಕ ಬದ್ಧತೆ:**

ಕಲಾತ್ಮಕ ಸಿನೆಮಾಗಳು ಹೆಚ್ಚಾಗಿ ಸಾಹಿತ್ಯ ಕೃತಿಗಳನ್ನು ಆಧರಿಸಿ ನಿರ್ಮಾಣ ಗೊಂಡಿರುತ್ತವೆ. ಈ ಕಾರಣಕ್ಕಾಗಿ ಲೇಖಕನ ಸಾಮಾಜಿಕ ಬದ್ಧತೆ ಅತನ ಕೃತಿಯಲ್ಲಿಯೂ ಮೂಡಿ ಬರುವುದರಿಂದ ಇಂತಹ ಕೃತಿಗಳನ್ನು ಹಿನ್ನೆಲೆಯಾಗಿಸಿ ತಯಾರಾಗುವ ಚಲನ ಚಿತ್ರಗಳಲ್ಲಿಯೂ ಈ ಅಂಶ ಮೇಳವಿಸಿಕೊಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಕಲಾತ್ಮಕ ಚಿತ್ರಗಳನ್ನು ಗಮನಿಸಿದಾಗ ಈ ಚಿತ್ರಗಳು ಸಮಾಜದ ಹಲವು ಓರೆಕೋರೆಗಳನ್ನು ತೆರೆಗೆ ತಂದು ಸಾಮಾಜಿಕ ಪ್ರಜ್ಞೆಯನ್ನು ಎಚ್ಚರಗೊಳಿಸುವ ಕೆಲಸ ಮಾಡಿವೆ. ಅಂತಹ ಕೆಲವು ಸಿನೆಮಾಗಳನ್ನು ನೋಡುವುದಾದಲ್ಲಿ; ಹೊಸ ಅಲೆಯ ಚಿತ್ರವೆಂದು ತೆರೆಗೆ ಬಂದ ಯು. ಆರ್. ಅನಂತಮೂರ್ತಿಯವರ ಕಾದಂಬರಿಯಾಧಾರಿತವಾದ ಚಿತ್ರಕಥೆಯನ್ನು ಹೊಂದಿರುವ 'ಸಂಸ್ಕಾರ' ೧೦ಸಿನೆಮಾ ಒಂದು ಸಮುದಾಯವು ನಂಬಿಕೊಂಡು ಬಂದ ನಂಬಿಕೆ ಮತ್ತು ಸಂಪ್ರದಾಯಗಳ ಹಿಂದಿನ ಮೌಢ್ಯವನ್ನು ಲೇಖಕರು ಅನಾವರಣ ಗೊಳಿಸಿರುವುದನ್ನು ಚಿತ್ರದ ನಿರ್ದೇಶಕರಾದ ಪಟ್ಟಾಭಿರಾಮರೆಡ್ಡಿಯವರು ಚಿತ್ರಮಾಧ್ಯಮದ ತೆರೆಯ ಮೇಲೆ

ಮೂಡಿಸಿರುವವರು. ನಂಬಿಕೆ ಮತ್ತು ವರ್ತಮಾನದ ನಡುವಿನ ಸಂಘರ್ಷ, ಕೆಲವರ ಸಣ್ಣತನ, ದಾರ್ಷ್ಟ್ಯ, ಪೊಳ್ಳುತನಗಳನ್ನು, ಸಾಮಾಜಿಕ ಅಸಮಾನತೆಗಳನ್ನು ಈ ಚಿತ್ರ ಯಥಾವತ್ತಾಗಿ ತೆರೆಗೆ ತಂದಿದೆ.

'ಚೋಮನ ದುಡಿ' ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಮಾಜಿಕವಾಗಿ ಅತ್ಯಂತ ಕೆಳಹಂತ ದಲ್ಲಿರುವ ಅಸ್ಪ್ರಶ್ಯ ಸಮುದಾಯದ ಒಕ್ಕಲು ಮಗನಾದ ಚೋಮನು ಭೂಮಿಯ ಒಡೆಯ ನಾಗಲು ನಡೆಸುವ ವಿಫಲ ಪ್ರಯತ್ನವನ್ನು ಹಾಗೂ ಅದರೊಂದಿಗೆ ತಳಕು ಹಾಕಿಕೊಂಡಿ ರುವ ಸಾಮಾಜಿಕ ನಂಬಿಕೆಗಳನ್ನು ಕೆ. ಶಿವರಾಮ ಕಾರಂತರು ಕಾದಂಬರಿಯ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಇದನ್ನು ಬಿ. ವಿ. ಕಾರಂತರು ಕೂಡ ಅಷ್ಟೇ ಚೆನ್ನಾಗಿ ಚಿತ್ರ ಮಾಧ್ಯಮಕ್ಕೆ ತಂದಿರುತ್ತಾರೆ. ಇದೇ ರೀತಿಯಲ್ಲಿ ಕಾಸರವಳ್ಳಿಯವರ 'ಘಟಶ್ರಾದ್ಧ' ಒಂದು ಸಮುದಾಯದ ಜನರು ವೈಧವ್ಯವನ್ನು ಕುರಿತು ತಳೆದಿರುವ ಮನೋಧರ್ಮದ ಬಗ್ಗೆ ಪ್ರೇಕ್ಷಕರ ಗಮನ ಸೆಳೆ ಯುತ್ತದೆ. ಇವರದೆ 'ದ್ವೀಪ' ಚಿತ್ರ ಯೋಜನೆಗಳು ಜನರ ಬದುಕನ್ನು ಪ್ರಭಾವಿಸುವ ಬಗೆ, ಜನರ ನಂಬಿಕೆ ಮತ್ತು ಪರಿಸರ, ಸರ್ಕಾರಿ ಆಡಳಿತ ವ್ಯವಸ್ಥೆಯ ಮನೋಧೋರಣೆಯನ್ನು ಸಿನೆಮಾ ಮಾಧ್ಯಮಕ್ಕೆ ತರಲಾಗಿದೆ. ಸರ್ಕಾರಿ ಆಡಳಿತ ಯಂತ್ರದ ವಿಡಂಬನೆ 'ತಬರನ ಕಥೆ' 'ಬೇರು' ನಂತಹ ಸಿನೆಮಾಗಳಲ್ಲಿದೆ. ಸ್ತ್ರೀಯರನ್ನು ದೈವೀಕರಿಸಿ ಅವರ ಮೇಲಿನ ಶೋಷಣೆಯನ್ನು ಸಾಮಾನ್ಯ ಸಂಗತಿಯಾಗಿಸುವುದನ್ನು 'ಸರಸಮ್ಮನ ಸಮಾಧಿ' ಚಿತ್ರದಲ್ಲಿ ಕಾಣುತ್ತೇವೆ. ಹೀಗೆ ಪ್ರತಿ ಚಿತ್ರವೂ ಆಯಾ ಕೃತಿಯೊಂದು ಕಟ್ಟಿಕೊಡಬಯಸುವ ಸಾಮಾಜಿಕ ವಿಷಯವನ್ನು ಚಿತ್ರಮಾಧ್ಯಮದ ಮೂಲಕ ಅಭಿವ್ಯಕ್ತಗೊಳಿಸಿರುವುದು ಕಂಡುಬರುತ್ತದೆ. ಇಲ್ಲಿ ನಿದರ್ಶ ನಾತ್ಮಕವಾಗಿ ಕೆಲವನ್ನು ಮಾತ್ರ ಗಮನಿಸಲಾಗಿದೆ.

ಒಟ್ಟಾರೆಯಾಗಿ ಕನ್ನಡ ಕಲಾತ್ಮಕ ಚಿತ್ರಗಳು, ಮುಖ್ಯ ಸಿನೆಮಾಗಳಿಗಿಂತ ಕೆಲ ಮಟ್ಟಿಗೆ ಭಿನ್ನವೆಂದು ಅನಿಸಿದರೂ ಅವು ಕನ್ನಡ ಸಿನೆಮಾದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿವೆ. ನಾಡಿನ ಸಾಮಾಜಿಕ ಸಮಸ್ಯೆಗಳನ್ನು ಮುನ್ನಲೆಗೆ ತಂದು ಅವುಗಳ ಬಗ್ಗೆ ಗಮನ ಸೆಳೆಯುವ ಕೆಲಸ ನಿರ್ವಹಿಸಿವೆ. ಇವು ಸಾಹಿತ್ಯ ಕೃತಿಗಳನ್ನು ಆಧರಿಸಿ ತಯಾ ರಾಗುವ ಪ್ರಯುಕ್ತ ಕನ್ನಡ ಓದುಗರ ಹರವಿನ ವಿಸ್ತಾರಕ್ಕೆ ನೆರವಾಗಿವೆ. ಜೊತೆಗೆ ಈ ಸಿನೆಮಾ ಗಳು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿನ ಬಹುತ್ವವನ್ನು ಪ್ರಸಾರ ಮಾಡುವಲ್ಲಿ ಬಹಳ ಮುಖ್ಯವಾದ ಪಾತ್ರವಹಿಸಿವೆ. ಹಾಗೆಯೆ ಕನ್ನಡ ನುಡಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸುವಲ್ಲಿಯೂ ಈ ಚಿತ್ರಗಳ ಕೊಡುಗೆ ಮಹತ್ವ ದ್ದಾಗಿದೆ.

## ಪರಾಮರ್ಶನ ಗ್ರಂಥಗಳು:


1. ಪುಟ್ಟಸ್ವಾಮಿ ಕೆ. , (2009), ಸಿನಿಮಾ ಯಾನ, ಹಸಿರು ಪ್ರಕಾಶನ, ಬೆಂಗಳೂರು.
2. ವಿಠ್ಠಲ್‌ರಾವ್, (2022), ಕನ್ನಡ ಸಿನಿಮಾ ಹೊಸ ಅಲೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.
3. ಶಂಕರ್ ಎನ್. ಎಸ್. , (2018), ಚಿತ್ರಕಥೆ ಹಾಗೆಂದರೇನು? ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು.
4. ನಮ್ಮ ಕರ್ನಾಟಕ, (೨೦೨೫), ಈದಿನ.ಕಾಂ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.